ಶ್ರೀ ನರಸಿಂಹನಾಯಕ್: ನಮ್ಮಲ್ಲಿ 30 ಶಾಲೆಗಳು ಹೊಸದಾಗಿ ಮಂಜೂರಾಗಿದೆ. ಅವುಗಳಿಗೆ ಕೊಠಡಿಯೂ ಇದೆ. ಆದರೆ 30 ಶಾಲೆಗಳಲ್ಲಿ ಒಬ್ಬರೂ ಶಿಕ್ಷಕರಿಲ್ಲ. ಅಲ್ಲಿ ಹುಡುಗರು ಎಲ್ಲಿಗೆ ಹೋಗಬೇಕು? ಹೇಗೆ ಶಾಲೆ ಕಲಿಯಬೇಕು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳುವರೆಂದು ಸಚಿವರು ತಿಳಿಸಬೇಕು.

ಶ್ರೀ ರಾಮಲಿಂಗಾರೆಡ್ಡಿ: ಟೀಚರ್ಸಿಲ್ಲದೆ ಶಾಲೆಗಳು ಇಲ್ಲ ಅಂತ ಇಲ್ಲ. ಡೆಪ್ಯುಟೇಶನ್ ಮಾಡಿರುತ್ತೇವೆ ಅಷ್ಟೇ ನಾವು. ಗುಲ್ಬರ್ಗಾ ಜಿಲ್ಲೆಯಲ್ಲಿ 423 ಖಾಲಿ ಇದೆ. ನಿಮ್ಮ ತಾಲೂಕಿನಲ್ಲಿ 147 ಖಾಲಿ ಇವೆ. ಈಗ 6848 ಹುದ್ದೆ ಭರ್ತಿಗೆ ಅನುಮತಿ ಸಿಕ್ಕಿದೆ. ಇದು ಭರ್ತಿಯಾದರೆ ನೂರಕ್ಕೆ ನೂರು 1:40ಯಂತೆ ಎಲ್ಲಾ ಶಾಲೆಗಳಲ್ಲೂ ಟೀಚರ್ಸಿದ್ದ ಹಾಗಾಗುತ್ತದೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಆಲ್ಕೋಡು ಹನುಮಂತಪ್ಪ – **ಆಬ್ಸೆಂಟ್**

ಶ್ರೀ ಹಂಪನಗೌಡ ಬಾದರ್ಲಿ – **ಆಬ್ಸೆಂಟ್**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4996
ಸದಸ್ಯರ ಹೆಸರು : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಜಿಲ್ಲಾ ಕೇಂದ್ರವಾದ ಕಾರವಾರದ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ 25 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 21 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 4 ಹುದ್ದೆಗಳು ಖಾಲಿ ಇರುತ್ತದೆ
ಆ.	ಹಾಗಿದ್ದರೆ ಸರ್ಕಾರ ಈವರೆಗೆ ವೈದ್ಯರನ್ನು ನೇಮಕ ಮಾಡದಿರಲು ಕಾರಣವೇನು;	ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳು ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಹ ಅಭ್ಯರ್ಥಿಗಳು ಲಭ್ಯವಾಗಿರುವುದಿಲ್ಲ.
ಇ.	ವೈದ್ಯರ ನೇಮಕ ಮಾಡಲು ಇರುವ ತೊಂದರೆಗಳೇನು ?	ಕೆಲವು ತಜ್ಞತೆಗಳ ಕೊರತೆ ಇರುವುದರಿಂದ ಹಾಗೂ ಅರ್ಹ ಅಭ್ಯರ್ಥಿಗಳು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಲಭ್ಯವಿಲ್ಲದಿರುವುದರಿಂದ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿರುವುದಿಲ್ಲ.

ಶ್ರೀ ಗಂಗಾಧರ ನಾಗೇಶ ಭಟ್: ಅಧ್ಯಕ್ಷರೇ ಪ್ರಶ್ನೆ ಅರಕ್ಕೆ ಕೊಟ್ಟಿರುವ ಉತ್ತರದ ಪ್ರಕಾರ ದಾಖಲೆಯಲ್ಲಿ ಕೆಲಸ ಮಾಡುವವರು 21 ಇರಬಹುದು. ಆದರೆ ಅಲ್ಲಿ ನೋಡಿದರೆ ನಾಲ್ವರು ವೈದ್ಯರಿಗಿಂತ ಮೇಲಿನ ವೈದ್ಯರು ಇರುವುದಿಲ್ಲ. ಬೇರೆ ಬೇರೆ ಕಾರಣಗಳನ್ನು ಹೇಳುತ್ತಿದ್ದಾರೆ. ರೋಗಿಗಳಿಗೆ ಬಹಳ ತೊಂದರೆಯಾಗುತ್ತಿದೆ. ದೊಡ್ಡ ಪ್ರಮಾಣದ ಆಸ್ಪತ್ರೆ ಅದು. ಆದರೆ ವೈದ್ಯರಿಲ್ಲದೆ ಇದ್ದರೆ ಏನು ಪ್ರಯೋಜನವಿಲ್ಲ. ಜೊತೆಗೆ ಅಲ್ಲಿ ಔಷಧಿ ಕೂಡ ಸರಿಯಾಗಿ ಸಿಗುತ್ತಿಲ್ಲ. ಬರೀ ಬರೆದು ಕೊಡುವುದು ಅಷ್ಟೇ ಡಾಕ್ಟರದು. ಹೊರಗಿನಿಂದ ತರಿಸಬೇಕಾಗಿದೆ. ಅಂತಹ ಪರಿಸ್ಥಿತಿಯಲ್ಲಿ ರೋಗಿಗಳಿಗೆ ಬಹಳ ತೊಂದರೆಯಾಗಿದ್ದು, ಏನಾದರೂ ಹೆಚ್ಚು ಕಡಿಮೆಯಾದರೆ ಅಲ್ಲಿಂದ ಗೋವಾ ಅಥವಾ ಮಣಿಪಾಲಕ್ಕೆ ಹೋಗಿ ಅಂತ ತಿಳಿಸಿಬಿಡುತ್ತಾರೆ. ಗೋವಾ ಮಣಿಪಾಲಗಳು ಬಹಳ ಡಿಸ್ಟೆನ್ಸ್‌ಇರುವುದರಿಂದ ರೋಗಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಅದಕ್ಕಾಗಿ ವಿಶೇಷ ಗಮನ ಕೊಟ್ಟು ಇದನ್ನು ಪರಿಹಾರ ಮಾಡಬೇಕೆಂದು ವಿನಂತಿಸುತ್ತಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅಧ್ಯಕ್ಷರೇ ಒಂದು ತಿಂಗಳ ಹಿಂದೆ 4 ವೈದ್ಯರನ್ನು ನೇಮಕ ಮಾಡಲಾಗಿದ್ದು, ಮೂವರು ರಿಪೋರ್ಟ್ ಮಾಡಿಕೊಂಡಿರುತ್ತಾರೆ. ಇನ್ನು 4 ಖಾಲಿ ಇವೆ. ಅವನ್ನೂ ಈ ತಿಂಗಳ ಅಂತ್ಯದೊಳಗೆ ರಾಜ್ಯಮಟ್ಟದಲ್ಲಿ ಕಾಂಟ್ರಾಕ್ಟ್ ನೇಮಕಾತಿ ಮಾಡುತ್ತಿದ್ದೇವೆ. ಆಗ ಆದ್ಯತೆ ಮೇರೆಗೆ ಕಾರವಾರ ಆಸ್ಪತ್ರೆಗೆ ಭರ್ತಿ ಮಾಡುತ್ತೇವೆ. ಆದರೆ ಅಲ್ಲಿರುವ ವೈದ್ಯರಲ್ಲಿ ಸರಿಯಾದ ರೀತಿ ಕೆಲಸ ಮಾಡುತ್ತಾ ಇಲ್ಲವೆಂದು ಶಾಸಕರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ನಮ್ಮ ಅಧಿಕಾರಿಗಳಿಂದ ತಕ್ಷಣ ಮಾಹಿತಿ ತರಿಸುತ್ತೇನೆ. ಜೊತೆಗೆ ಅವರೇನಾದರೂ ಇಂತಹ ವೈದ್ಯರು ಸರಿಯಾದ ರೀತಿ ಕೆಲಸಕ್ಕೆ ಹೋಗುತ್ತಿಲ್ಲವೆಂದು ನನಗೆ ಮಾಹಿತಿ ಕೊಟ್ಟರೆ ಅದನ್ನು ಆಧರಿಸಿ ಅವರ ಮೇಲೇನಾದರೂ ಶಿಸ್ತಿನ ಕ್ರಮ ತೆಗೆದುಕೊಳ್ಳಬಹುದೋ, ಅವರೇನಾದರೂ ತಪ್ಪಿಸಿಕೊಳ್ಳುತ್ತಿದ್ದರೆ, ಹಾಜರಿ ಹಾಕಿ ಹೋಗುತ್ತಾ ಇದ್ದರೆ ಅಥವಾ ಯಾವುದೇ ನಿರ್ಲಕ್ಷತೆ ತೋರುತ್ತಿದ್ದರೆ ಅವರು ಮಾಹಿತಿ ನನಗೆ ಈಗಲೇ ಕೊಟ್ಟರೆ ನಮ್ಮ ಅಧಿಕಾರಿಗಳಿಂದ ನಾನು ತರಿಸುವ ಮಾಹಿತಿ ಜೊತೆ ಇವರದನ್ನೂ ಆಧರಿಸಿ ಏನಾದರೂ ಕ್ರಮ ಜರುಗಿಸಲು ನನಗೆ ಅನುಕೂಲವಾಗುತ್ತದೆ. ಔಷಧಿ ವಿಚಾರದಲ್ಲಿ ಯಾವುದೇ ಕೊರತೆ ಇಲ್ಲ. ಎಲ್ಲಾ ಔಷಧಿಯನ್ನು ಸರಬರಾಜು ಮಾಡುತ್ತಿದ್ದೇವೆ. ಈಗಾಗಲೇ ಎಲ್ಲಾ ಡಿಎಚ್ಓ, ಜಿಲ್ಲಾ ಸರ್ಜನ್‌ಗಳಿಗೆ ಎಲ್ಲಿ ನಿಮಗೆ ಕೊರತೆಯಾಗುತ್ತದೆ ತಕ್ಷಣ ಹೆಚ್ಚುವರಿಯಾಗಿ ನಮಗೆ ಕೇಳಿ, ಅದನ್ನು ಸಪ್ಲೆ ಮಾಡಲು ನಮ್ಮ ಆಯುಕ್ತರಿಗೆ ನಿರ್ದೇಶನ ಸಹ ನಾವು ಕೊಟ್ಟಿದ್ದೇವೆ. ಅಥವಾ ನಮ್ಮ ಪಟ್ಟಿಯಲ್ಲಿಲ್ಲದ ಔಷಧ ಅಡಿಶನಲ್ಲಾಗಿ ಅವಶ್ಯಕತೆ

ಬಿದ್ದರೆ ಬಿಪಿಎಲ್‌ನವರಿಗೆ ಅದನ್ನೂ ಯೂಸರ್ಸ್ ಮೊಬಲಗಿನಲ್ಲಿ ಕೊಡಿಸಲು ಸಹ ಅವರಿಗೆ ಅವಕಾಶ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರೇ ಯಾವ್ಯಾವ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲ ಅವಕ್ಕೆಲ್ಲ ಬೀಗ ಹಾಕಿಸಿ ಬಿಡಿ. ಎಲ್ಲಿ ಕೊರತೆ ಇದೆ ಅವರನ್ನು ಅಲ್ಲಿಗಾದರೂ ಕಳಿಸಿ. ಉದಾಹರಣೆಗೆ ಶಿಕಾರಿಪುರದ 150 ಹಾಸಿಗೆ ಆಸ್ಪತ್ರೆ. ಚುನಾವಣೆ ಬಂದಾಗ ಕುಮಾರಸ್ವಾಮಿಗಳು ಹೇಳಿದರು. ಡಾಕ್ಟರುಗಳಿಲ್ಲ ನಾನು ಆರೋಗ್ಯ ಸಚಿವರಿಗೆ ಹೇಳಿದ್ದೇನೆ ಅಂತ, ನೀವೂ ಹಾಕಿದ್ದೇನೆ ಅಂದಿರಿ. ಒಬ್ಬನೇ ಡಾಕ್ಟರಿದ್ದಾನೆ. ಶಿರಾಳ ಕೊಪ್ಪ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲ. ಅದಕ್ಕೇ ಎರಡೂ ಆಸ್ಪತ್ರೆಗೂ ಬೀಗ ಹಾಕಿ ತಂದು ಕೊಡುತ್ತೇನೆ. ಅಲ್ಲಿ ಒಬ್ಬರೇ ಒಬ್ಬ ಡಾಕ್ಟರ್ ಇದ್ದಾರೆ. ಅವರನ್ನು ಒಳ್ಳೆಯ ಕಡೆ ಕಳಿಸಿಕೊಡಿ. ಒಂದು ಸಲ ಕ್ಲೋಸ್ ಮಾಡಿ ಸಾರ್, ನಾನು ನೊಂದು ಹೇಳುತ್ತೇನೆ. ವಿರೋಧ ಪಕ್ಷದ ನಾಯಕನಾಗಿ ಇಲ್ಲಿ ನಿಂತು ಮಾತನಾಡಲು ನಾಚಿಕೆಯಾಗುತ್ತದೆ. ಚುನಾವಣೆ ಸಮಯದಲ್ಲಿ ಕುಮಾರಸ್ವಾಮಿಯವರು ಹೇಳುವ ಸ್ಥಿತಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ಬಂತು. ನಿನ್ನೆ ನಾನು ಆರೋಗ್ಯ ಕಾರ್ಯದರ್ಶಿಯ ಜೊತೆ ಮಾತನಾಡಿದೆ. ಶಿಕಾರಿಪುರ 150 ಹಾಸಿಗೆ ಆಸ್ಪತ್ರೆಗೆ ಒಬ್ಬನೇ ಒಬ್ಬ ವೈದ್ಯ ಇದ್ದಾನೆ. 13–14 ಇರುವ ಕಡೆ ಶಿರಾಳ ಕೊಪ್ಪ ಐದಾರು ಜನ ಇರುವ ಕಡೆ ಒಬ್ಬ ಲೇಡಿ ಡಾಕ್ಟರು, ಚೆನ್ನಾಗಿ ಕೆಲಸ ಮಾಡುತ್ತಿದ್ದರು, ಯಾರು ವರ್ಗಾವಣೆ ಮಾಡಿಸಿದರೋ ಗೊತ್ತಿಲ್ಲ. ನಾನೇನೂ ವರ್ಗಾವಣೆ ಕೇಳಲಿಲ್ಲ. ಎಲ್ಲೆಲ್ಲಿ ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅವರನ್ನೆಲ್ಲ ಶಿಕಾರಿಪುರಕ್ಕೆ ಹಾಕಿ ಸ್ವಾಮಿ ನಾವು ಮ್ಯಾನೇಜ್ ಮಾಡುತ್ತೇವೆ. ಎಂಥವರೋ ಡಾಕ್ಟರಿದ್ದಾರೆ ಅಂದರೆ ಸಾಕು ನಾವು ಮರ್ಯಾದೆಯಿಂದ ಓಡಾಡುತ್ತೇವೆ. ಇಲ್ಲಿ ಬೀಗ ಹಾಕಿಸಿಬಿಡಿ. ಒಂದು ಕಾರ್ಯಕ್ರಮ ರೂಪಿಸಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಬಸವನ ಬಾಗೇವಾಡಿ ತಾಲೂಕು ಮುಖ್ಯ ಕೇಂದ್ರ ಹೋಬಳಿ ಕೇಂದ್ರವಲ್ಲ ನಾವೇ ಸಂಬಂಧಿತ ಶಾಸಕರು, ನಮ್ಮನ್ನೇ ಕೇಳದೆ ನೀವು ವರ್ಗ ಮಾಡಿದಿರಿ. ಹೋಗಲಿ ಬಿಜಾಪುರ ಜಿಲ್ಲೆಗೆ ಒಬ್ಬ ಚಲೋ ಡಿಎಚ್‌ಒ ಆದರೂ ಕೊಟ್ಟಿದ್ದೀರಾ? ಆರು ಕ್ರಿಮಿನಲ್ ಕೇಸ್ ಇದೆ ಅವನ ಮೇಲೆ. ನಿಮ್ಮ ಇಲಾಖೆಯಿಂದ 11 ಸಲ ಸಸ್ಪೆಂಡ್ ಆಗಿದ್ದಾನೆ. ಅಂಥವರನ್ನು ನೀವು ಡಿಎಚ್‌ಒ ಆಗಿ ಹಾಕುತ್ತೀರಿ ಎಂದು ಹೇಳಿದರೆ ನಾವು ನಿಮಗೆ ಇನ್ನೇನು ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಹೀಗೆ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ಪ್ರಶ್ನೋತ್ತರವನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲವಲ್ಲ. ಏನಾದರೂ ಪ್ರಶ್ನೆಗೆ ಒಂದು–

ಎರಡು ಉಪಪ್ರಶ್ನೆಗಳನ್ನು ಕೇಳಬಹುದು. ಏನು ಇದು? ಮಾನ್ಯ ಮಂತ್ರಿಗಳು ಹೇಳಿ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಚ್. ಆಂಜನೇಯ: ಮಾನ್ಯ ಅಧ್ಯಕ್ಷರೇ ಎಲ್ಲೆಲ್ಲಿ ವೈದ್ಯರ ಕೊರತೆ ಇದೆಯಲ್ಲ ಆ ಜಿಲ್ಲೆಯಲ್ಲಿ ತುಂಬುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ. ವಿಶ್ವ ಬ್ಯಾಂಕ್‌ನಿಂದ 800–900 ಕೋಟಿ ರೂಪಾಯಿ ಸಾಲವನ್ನು ತೆಗೆದುಕೊಂಡು ಆಸ್ಪತ್ರೆಗಳನ್ನು ಕಟ್ಟಿಸಿ ಅಲ್ಲಿ ಸುಂದರವಾದ ಬಿಲ್ಡಿಂಗ್ ಕಟ್ಟಿ ಅಲ್ಲಿ ಡಾಕ್ಟರ್‌ಗಳೇ ಇಲ್ಲವೆನ್ನುವುದಾದರೆ ಹೇಗೆ? ನಿಮ್ಮ ಕೆ.ಆರ್. ಪೇಟೆಯಲ್ಲಿ ಒಬ್ಬ ಡಾಕ್ಟರನ್ನು ಟ್ರಾನ್ಸ್‌ಫರ್ ಮಾಡಿದರೆ ಇನ್ನೊಬ್ಬರನ್ನು ಅಲ್ಲಿ ನೇಮಕ ಮಾಡಬೇಕಲ್ಲವೇ ಸಾರ್, ವರ್ಗಾವಣೆ ಯಡಿಯೂರಪ್ಪ ಹೇಳಲಿ, ಅವರಪ್ಪ ಹೇಳಲಿ, ನೀವು ವರ್ಗಾವಣೆ ಮಾಡುವುದಕ್ಕೆ ಮುಂಚೆ ಅಟ್‌ಲೀಸ್ಟ್ ಒಂದು ತಾಲೂಕಿಗೆ ಎಲ್ಲಿ ಡಾಕ್ಟರ್‌ಗಳ ಭರ್ತಿ ಇದೆ? ಶಿಕಾರಿಪುರದಂಥ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಈ ರೀತಿಯಾದರೆ ಇದರ ಪರಿಣಾಮವೇನಾಗಬಹುದು ಸಾರ್.

ಅಧ್ಯಕ್ಷರು: ಪ್ರಶ್ನೋತ್ತರ ಕಾಲದಲ್ಲಿ ಹೀಗೆ ಒಂದೊಂದು ಪ್ರಶ್ನೆಗೆ 5–10 ನಿಮಿಷ ತೆಗೆದುಕೊಂಡರೆ ಹೇಗೆ? ಒಂದು ಗಂಟೆಯೊಳಗೆ ಹೇಗೆ ಮುಗಿಸುವುದು. ಉಳಿದವುಗಳೆಲ್ಲ ಲ್ಯಾಪ್ಸ್ ಆಗುತ್ತವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಿ ಸಾರ್.

ಅಧ್ಯಕ್ಷರು: ಸಮಸ್ಯೆ ಅರ್ಥವಾಯಿತು. ಅದಕ್ಕೆ ಉತ್ತರವನ್ನು ಹೇಳಿಸುತ್ತಿರುವುದು ಸಮರ್ಪಕವಾಗಿ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೇ, ನೇಮಕಾತಿ ಬಗ್ಗೆ ಖಾಲಿ ಇರುವ ಜಾಗವನ್ನು ಭರ್ತಿ ಮಾಡಿರುವ ಬಗ್ಗೆ ನನಗೆ ಅಧ್ಯಕ್ಷರು ಅನುಮತಿಯನ್ನು ಕೊಟ್ಟರೆ ನಾಳೆಯೋ ನಾಡಿದ್ದೋ ಸಂಪೂರ್ಣವಾಗಿ ಇತ್ತೀಚಿನ ದಿನಗಳಲ್ಲಿ ಎಷ್ಟು ಹೊಸ ನೇಮಕಾತಿಗಳನ್ನು ಮಾಡಿದ್ದೇವೆ. ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕಾಂಟ್ರಾಕ್ಟ್ ಆಗಿ ತೆಗೆದುಕೊಳ್ಳುವುದಕ್ಕೆ ಅಲ್ಲಿ ಯಾವುದೇ ತರಹದ ರಿಸ್ಟ್ರಿಕ್ಷನ್ ಇಲ್ಲ. ಅನುಮತಿ

ಕಂಟಿನ್ಯೂಯನಸ್ ಪ್ರೋಸಸ್‌ನಲ್ಲಿದೆ. ಮೊನ್ನೆ ವಾಕ್-ಇನ್ ಇಂಟರ್‌ವ್ಯೂ ಮಾಡಿ 130 ಜನ ಸ್ಪೆಷಲಿಸ್ಟ್‌ಗಳನ್ನು ನೇಮಕ ಮಾಡಿದ್ದೇವೆ. ಮೊನ್ನೆ ಮತ್ತೆ ಅದನ್ನು ಸ್ಟೇಟ್ ಲೆವೆಲ್‌ನಲ್ಲಿ ಕಾಲ್ ಮಾಡಿದ್ದೇವೆ. 250 ಅರ್ಜಿಗಳು ಬಂದಿವೆ. ಇತ್ತೀಚಿನ ದಿನಗಳಲ್ಲಿ ನಮ್ಮ ಹತ್ತಿರ 400 ಹುದ್ದೆ ಖಾಲಿ ಇದೆ. ಶಿಕಾರಿಪುರಕ್ಕೂ ಸಹಾ ನಾವು ಮೂರು ಜನ ಡಾಕ್ಟರ್‌ಗಳನ್ನು ನೇಮಕಾತಿ ಮಾಡಿದ್ದೇವೆ. ಅದನ್ನು ಈಗ ನಾನು ಒಂದು ಗಂಟೆಯೊಳಗೆ ಯಾರು ರಿಪೋರ್ಟ್ ಮಾಡಿಕೊಂಡಿದ್ದಾರೆ. ಯಾರು ಮಾಡಿಕೊಂಡಿಲ್ಲ ಎನ್ನುವುದನ್ನು ತರಿಸಿ ಮಾಹಿತಿಯನ್ನು ಕೊಡುತ್ತೇನೆ. ಮೂರು ನಾಲ್ಕು ಜನರನ್ನು ನಾನು ಮೊದಲೇ ಹೋಗಿ ಭೇಟಿ ಮಾಡಿದಾಗ ಅಲ್ಲಿ ಒಬ್ಬರೇ ಒಬ್ಬ ಡಾಕ್ಟರ್ ಕೆಲಸ ಮಾಡುತ್ತಿದ್ದರು. ಒಬ್ಬ ಡಾಕ್ಟರ್ ಈಗ ಇರುವುದು ಅಲ್ಲ. ಕಳೆದ 4 ವರ್ಷಗಳಿಂದಲೂ ಅಲ್ಲಿ ಶಿಕಾರಿಪುರ, ಸೊರಬ ಎರಡೂ ಕಡೆ ಸಿಂಗಲ್ ಡಾಕ್ಟರ್ ಕೆಲಸ ಮಾಡ್ತಿದ್ದಾರೆಂದು ಮಾಹಿತಿ ಬಂದ ಮೇಲೆ ನಾವು ತಕ್ಷಣ ಮೂರು-ನಾಲ್ಕು ಜನರನ್ನು ಮಾಡಿ ಯಾವುದೇ ಒತ್ತಡ ಬಂದರೂ ಸಹ ನಾವು ಅಲ್ಲಿ ವರ್ಗಾವಣೆಯನ್ನು ಛೇಂಜ್ ಮಾಡಿಲ್ಲ. ಅಲ್ಲಿ ರಿಪೋರ್ಟ್ ಮಾಡಿಕೊಂಡಿದ್ದಾರೆಯೇ ಇಲ್ಲವೇ ಎನ್ನುವುದರ ಬಗ್ಗೆ ನಾನು ಈಗಲೇ ಖಚಿತ ಮಾಡಿ ಮಾನ್ಯ ವಿರೋಧಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪನವರಿಗೆ ತಿಳಿಸುತ್ತೇನೆ ಮತ್ತು ಕೆಲವು ವರ್ಗಾವಣೆಯನ್ನು ಕೆಲವು ಶಾಸಕರ ಕೋರಿಕೆಯ ಮೇರೆಗೆ ಮಾಡಿರುತ್ತೇವೆ. ಯಾವುದಾದರೂ ಇಲಾಖೆಯಲ್ಲಿ ಕಂಪ್ಲೇಂಟ್ ಇದ್ದರೆ ಮಾಡಿರುತ್ತೇವೆ. ಅದು ಬಿಟ್ಟರೆ ವೈಯಕ್ತಿಕವಾಗಿ ಇಲಾಖೆಯಾಗಲೀ, ಮಂತ್ರಿಗಳಾಗಲೀ, ವರ್ಗಾವಣೆ ಮಾಡುವ ಅವಶ್ಯಕತೆ ನಮಗೆ ಇಲ್ಲ. ಮೊದಲೇ ಡಾಕ್ಟರ್ಸ್ ಕೊರತೆ ಇರಬೇಕಾದರೆ ಅನಾವಶ್ಯಕವಾಗಿ ವರ್ಗಾವಣೆ ಮಾಡುವುದಿಲ್ಲ. ವರ್ಗಾವಣೆ ಬಗ್ಗೆ ಇಲಾಖೆಗೆ ಪೂರ್ತಿ ಬಿಟ್ಟರೆ ಏನು ಬೇಕಾದರೂ ಅವರು ಕರೆಕ್ಟ್ ಆಗಿ ಮಾಡಬಹುದು. ಶಾಸಕರು ರಿಕ್ವೆಸ್ಟ್ ಮಾಡಿದಾಗ ಅನಿವಾರ್ಯ. ಶಾಸಕರ ರಿಕ್ವೆಸ್ಟ್ ಮೇಲೆ ನಾವು ಒಂದೊಂದು ಮಾಡಬೇಕಾಗುತ್ತದೆ. ಅದರ ಮೇಲೆ ಮಾಡಿದ್ದೇವೆ. ಆ ತರಹದ್ದು ಏನಾದರೂ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಶಾಸಕರ ರಿಕ್ವೆಸ್ಟ್ ಮೇಲೆ ಮಾಡಿಲ್ಲ. ನಿಮ್ಮ ಇಷ್ಟ ಬಂದಂತೆ ಮಾಡಿದ್ದೀರಿ. ಯಾರ್ಯಾರಿಗೆ ಬೇಕೋ, ಎಲ್ಲೆಲ್ಲಿಗೆ ಬೇಕೋ ಅಲ್ಲಿಗೆ ಮಾಡಿದ್ದೀರಿ. ಶಾಸಕರ ರಿಕ್ವೆಸ್ಟ್ ಮೇಲೆ ಯಾವ ಟ್ರಾನ್ಸ್‌ಫರ್ ಅನ್ನೂ ಮಾಡಿಲ್ಲ. ನಿಮಗೆ ಇಷ್ಟ ಬಂದಂತೆ ಮಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು: ಸ್ವಾಮಿ, ನೀವುಗಳು ಯಾರ ಪರ್ಮಿಷನನ್ನು ತೆಗೆದುಕೊಂಡು ಮಾತನಾಡುತ್ತಿದ್ದೀರಿ? ಯಾವುದೂ ರೆಕಾರ್ಡ್‌ಗೆ ಹೋಗಕೂಡದು. ಇದೇನು

ಸಂತೆಯಾಗಿ ಹೋಯಿತಲ್ಲಾ? ಈಗ ಎಲ್ಲಾ ಸೇರಿ ಒಂದು ಮಾಡ್ರಿ ಅವರನ್ನು ಏಕೆ ಈ ರೀತಿ ಮಾಡುತ್ತೀರಿ? ಟ್ರಾನ್ಸ್‌ಫರ್‌ಗೆ ಒಂದು ಗೈಡ್‌ಲೈನ್. ಆ ಗೈಡ್‌ಲೈನ್ ಬಗ್ಗೆ. ನೀವೆಲ್ಲಾ ಕುಳಿತುಕೊಂಡು ಮಾತನಾಡಿ. ಒಂದು ರೌಂಡ್ ಟೇಬಲ್ ಮಾಡಿ. ಒಂದು ಗೈಡ್‌ಲೈನ್‌ನ್ನು ಮಾಡಿ. ಆ ಪ್ರಕಾರ ಮಂತ್ರಿಗಳು ಮಾಡಲಿ. ಇಲ್ಲಿನ ಒಂದು ಹೇಳುತ್ತೀರಿ. ಅಲ್ಲಿ ಒಂದು ಮಾಡುತ್ತೀರಿ

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ ಒಂದು ಅಲ್ಲಿ ಒಂದು ಯಾರು ಮಾಡಿದ್ದೇವೆ ಹೇಳಿ ಸಾರ್?

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ತಮ್ಮ ಪ್ರಶ್ನೆ ಕೇಳಿ ಮುಂದಿನ ಪ್ರಶ್ನೆ ಕೇಳಿ. ಈಗ ಅವರು ಉತ್ತರ ಹೇಳಿದ್ದಾರೆ. ಮುಂದಕ್ಕೆ ಹೋಗೋಣ.

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ.: ಈಗ ನಾವ್ಯಾರೂ ಹೇಳಲೇ ಇಲ್ಲ ತಲಘಟ್ಟಪುರದ ಲೇಡಿ ಡಾಕ್ಟರ್ ಟ್ರಾನ್ಸ್‌ಫರ್ ಆಗಿದೆ. ನಾವು ಯಾರೂ ಬರೆದೇ ಕೊಟ್ಟಿಲ್ಲ. ಅಲ್ಲಿ ಮೂರು ತಿಂಗಳಿಂದ ಲೇಡಿ ಡಾಕ್ಟರ್ ಇಲ್ಲ. ತುಂಬಾ ತೊಂದರೆಯಾಗಿದೆ.

ಅಧ್ಯಕ್ಷರು: ತೊಂದರೆಯಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತಿರುವುದು. ಒಂದು ಡೆಫನೇಟ್ ಟ್ರಾನ್ಸ್‌ಫರ್ ಪಾಲಿಸಿಯನ್ನು ಇಟ್ಟುಕೊಂಡು ಆ ಪ್ರಕಾರ ಮಾಡ್ರಿ. ಏನಾದರೂ ಡೆಫನೇಟ್‌ಆಗಿ ಎಲ್ಲರಿಗೂ ಅನುಕೂಲವಾಗುವ ಹಾಗೆ ಮಾಡ್ರಿ. ಗಲಾಟೆಯಿಂದ ಪರ್ಯಾವಸಾನವಾಯಿತು. ರಿಸಲ್ಟ್ ಮಾತ್ರ ನಥಿಂಗ್ ಪ್ರಯೋಜನವೇನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಹೆಣ್ಣು ಮಕ್ಕಳ ಮೇಲೆ ತಮಗೆ ಕರುಣೆ ಇರಲಿ. ಹೀಗಾಗಿಬಿಟ್ಟರೆ ಪರಿಸ್ಥಿತಿಯೇನು? ನಮ್ಮ ಸದನದಲ್ಲಿ ಐದಾರು ಜನ ಹೆಣ್ಣುಮಕ್ಕಳಿದ್ದಾರೆ. ಅವರ ಮೇಲೆ ಸಿಟ್ಟಾದರೆ ನಮ್ಮ ಗತಿಯೇನು?

ಅಧ್ಯಕ್ಷರು: ತಾವು ಪ್ರಶ್ನೆ ಕೇಳಿ. ಈಗ ಗಂಗಾಧರ ನಾಗೇಶ್‌ಭಟ್ ಅವರ ಪ್ರಶ್ನೆ ಆಯಿತು.

ಶ್ರೀ ಗಂಗಾಧರ ನಾಗೇಶ ಭಟ್:–ಜಿಲ್ಲಾ ಆಸ್ಪತ್ರೆಯಲ್ಲಿ 400 ಬೆಡ್ ಆಸ್ಪತ್ರೆಯಾದರೂ ಅದರಲ್ಲಿ ನೂರು ರೋಗಿಗಳಿಗಿಂತ ಜಾಸ್ತಿ ರೋಗಿಗಳು ಇಲ್ಲ. ಆದರೂ ಕೂಡಾ ಮೆಡಿಸನ್ ಅನ್ನು ಹೊರಗಿನಿಂದ ತಂದು ಕೊಡುತ್ತಾರೆ. ಅದರ ಬಗ್ಗೆಯೂ ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲಾ ಆಸ್ಪತ್ರೆ 400 ಬೆಡ್ ಆಸ್ಪತ್ರೆ. ಆದರೆ ಒಂದೇ ಒಂದು. ನಿಮಗೆ ವಿವರ ತೋರಿಸುತ್ತೇನೆ. 400 ಬೆಡ್ ಆಸ್ಪತ್ರೆಗೆ ನೀವು ಕೊಡುತ್ತಿರುವ ಔಷಧಿ, ಡಾಕ್ಟರ್ ಬಗ್ಗೆ ನೀವೆಲ್ಲಾ ಹೇಳುತ್ತೀರಲ್ಲ, ರೋಗಿಗಳು ಎಷ್ಟು ಬರುತ್ತಿದ್ದಾರೆ? ನೋಡಿ. ಅದರ ವಿವರವನ್ನೂ ಹೇಳಿ. ರೋಗಿಗಳು ಏಕೆ ಬರುವುದಿಲ್ಲ? ದಿನಕ್ಕೆ ನೂರು ಜನರೂ ಬರುವುದಿಲ್ಲ. ಅಲ್ಲಿ 400 ಬೆಡ್ ಆಸ್ಪತ್ರೆ. ಜಿಲ್ಲಾ ಆಸ್ಪತ್ರೆ, ದಿನಕ್ಕೆ ನೂರು ಜನರು ಹೋಗುವುದಿಲ್ಲ. ಏಕೆ ಹೋಗುವುದಿಲ್ಲವೆಂದರೆ ಅಧ್ಯಕ್ಷರೆ, ನಿಮಗೆ ಹೇಳುತ್ತೇನೆ. ಮಾಜಿ ಸಂಸದರು ನಮ್ಮ ಮಾರ್ಗರೇಟ್ ಆಳ್ವ ಅವರು ಸಚಿವರಾದ ದೇಶಪಾಂಡೆಯವರಿಗೆ ಹೇಳಿದರು. ನಾನು ಈ ಆಸ್ಪತ್ರೆ ಎದುರುಗಡೆ ಧರಣಿ ಮಾಡುತ್ತೇನೆ. ಈ ಆಸ್ಪತ್ರೆಯನ್ನು ಸರಿ ಮಾಡದೆ ಹೋದರೆ ಎಂದು ಹೇಳಿದರು. ಅವರದು ಹಿಂದಿನ ಸರ್ಕಾರ.

ಅಧ್ಯಕ್ಷರು: ಇದು ಹಳೆಯ ಖಾಯಿಲೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಷ್ಟು ಹಾಳಾಗಿ ಹೋಗಿದೆ. ಅದಕ್ಕಾಗಿ ನೀವೊಂದು ಹೊಸ ಕಾರ್ಯಕ್ರಮವನ್ನಾದರೂ ಮಾಡಬೇಕು.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ವ್ಯವಸ್ಥೆ ಸರಿಯಾಗಿದೆ. ದಯಮಾಡಿ ವ್ಯವಸ್ಥೆಯಲ್ಲಿ ತಾವು ಪಾಲುದಾರರಾಗಿದ್ದೀರಿ. ಶಾಸಕರಿಗೂ ಸಹ ತಾವು ದಯಮಾಡಿ ಯಾವುದಾದರೂ ಕೇಳಲಿಕ್ಕೆ ಅಥವಾ ತಮ್ಮ ಸಮಸ್ಯೆಗೆ ಪರಿಹಾರವನ್ನು ಹುಡುಕಿಕೊಳ್ಳುವುದಕ್ಕೆ ದಯಮಾಡಿ ಯಾವುದೇ ಅವಕಾಶವಿಲ್ಲ ಎಂದು ಹೇಳಬೇಡಿ. ನೀವು ಅಲ್ಲಿ ಕಮಿಟಿಯಲ್ಲಿರುತ್ತೀರಿ. ಜೊತೆಗೆ ಶಾಸಕರಾಗಿರುತ್ತೀರಿ. ಕಮಿಟಿಯನ್ನೂ ಮಾಡಿದ್ದೇವೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾವ ಕಮಿಟಿ ಮಾಡಿದ್ದಾರೆ? ಎಲ್ಲಿ ಮಾಡಿದ್ದೀರಿ?

ಅಧ್ಯಕ್ಷರು: ಈಗ ಮಾನ್ಯ ಸಚಿವರು ದಯಮಾಡಿ ಒಂದು ಸಭೆಯನ್ನು ಕರೆದು ಇತ್ಯರ್ಥ ಮಾಡಿ.

ಒಬ್ಬ ಮಾನ್ಯ ಸದಸ್ಯರು: ಪಾಲುದಾರಿಕೆಯನ್ನು ಯಾರಿಗೆ ಕೊಡುತ್ತಾರೆ? ಅದನ್ನು ಹೇಳಬೇಕಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ: ಅದನ್ನು ಛೇಂಜ್ ಮಾಡಿ ಆದೇಶವನ್ನು ಹೊರಡಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಇದು ಯಾವ ಸಮಿತಿ? ಎಲ್ಲಿದೆ ಆ ಸಮಿತಿ? ಸಮಿತಿಯನ್ನು ಮಾಡಿದವರು ಯಾರು? ಸದಸ್ಯರು ಯಾರು? ಯಾರಿಗೂ ಗೊತ್ತಿಲ್ಲ ಏನು ಇದು?

ಶ್ರೀ ಎಶ್ವೇಶ್ವರ ಹೆಗಡೆ: ಈ ಸದ್ಗನದಲ್ಲಿ ತಪ್ಪು ಮಾಹಿತಿಯನ್ನು ಹೇಳಬಾರದಲ್ಲ. ಮತ್ತೆ ನಾವೆಲ್ಲ ಆ ಸಮಿತಿಯಲ್ಲಿದ್ದೇವೆಂದು ಹೇಳಿ ನಮ್ಮ ಬಗ್ಗೆ ಜನರು ಏನೆಂದುಕೊಳ್ಳುತ್ತಾರೆ?

ಅಧ್ಯಕ್ಷರು: ಮಾನ್ಯ ಸಚಿವರೇ ಕೇಳಿ, ಈಗ ತಾವು ಸಭೆ ಮಾಡಿ ಎಲ್ಲೆಲ್ಲಿ ಖಾಲಿ ಇದೆ. ಏನು ತಾಪತ್ರಯಗಳಿದೆ ಎನ್ನುವುದನ್ನು ತೆಗೆದುಕೊಂಡು ಒಂದು ಸಭೆ ಮಾಡಿ ಶಾಸಕರುಗಳನ್ನು ಕರೆಸಿ ಡಿಸ್ಟ್ರಿಕ್ಟ್‌ವೈಸ್ ಮಾಡಿ. ಈಗ ಅಸೆಂಬ್ಲಿ ಮುಗಿಯುವುದರೊಳಗಡೆ ಅದಕ್ಕೆ ನೀವೇನು ಮಾಡಬೇಕು. ಅದನ್ನು ಮಾಡ್ರಿ. ಯೋಗ್ಯವಾದ ಕ್ರಮಗಳನ್ನು ತೆಗೆದುಕೊಳ್ಳಿ. ಅಲ್ಲಿಗೆ ಮುಗಿಸೋಣ.

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೇ, ತಮ್ಮ ಸೂಚನೆಯಂತೆ ಎಲ್ಲಾ ಶಾಸಕರ ಅಭಿಪ್ರಾಯವನ್ನು ತೆಗೆದುಕೊಂಡು ಅದರ ಬಗ್ಗೆ ಸೀರಿಯಸ್ ಆಗಿ ಅಸೆಂಬ್ಲಿ ಮುಗಿಯುವುದರೊಳಗಡೆ ಒಂದು ಮೀಟಿಂಗನ್ನು ಮಾಡುತ್ತೇವೆ. ಅದರ ಜೊತೆಗೆ ತಾವೇನು ಕಳೆದ ಅಸೆಂಬ್ಲಿಯಲ್ಲಿ ಕಮಿಟಿ ಮಾಡಬೇಕೆಂದು ಹೇಳಿದ್ದೀರಿ. ಅದು ಈಗಾಗಲೇ ಅಪ್ರೂವ್ ಆಗಿದೆ. ಮತ್ತು ಎಲ್ಲಾ ಜಿಲ್ಲಾ ನಮ್ಮ ಆಡಳಿತಾಧಿಕಾರಿಗಳಿಗೆ ಆ ಪಟ್ಟಿಯನ್ನು ತರಿಸಿಕೊಂಡು ಅಪ್ರೂವ್ ಮಾಡುವುದಕ್ಕೆ ಈಗ ಜಿಲ್ಲಾ ಮಂತ್ರಿಗಳಿಗೆ ತಾಲೂಕು ಆಸ್ಪತ್ರೆ ಮತ್ತು ಪಿಎಚ್‌ಯು ಮತ್ತು ಡಿಎಚ್‌ಸಿಗಳಿಗೆ ನಾವು ಕಮಿಟಿಯನ್ನು ಅಪ್ರೂವ್ ಮಾಡುವುದಕ್ಕೆ ಚಾಕ್‌ಔಟ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ಡಿಸ್ಟ್ರಿಕ್ಟ್ ಆಸ್ಪತ್ರೆಗಳಿಗೆ ನಾನೇ ಮಾಡಿದೆ ನೋಡಿ.

(ಗೊಂದಲ)

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರು ಇದು ಹತ್ತು ನಿಮಿಷವಾಯಿತು.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡ್ರಿ. ಎಲ್ಲರೂ ಈ ರೀತಿ ಮಧ್ಯೆ ಮಧ್ಯೆ ಮಾತನಾಡಿದರೆ ಅವರು ಉತ್ತರ ಕೊಡುವುದನ್ನು ಹೇಗೆ ಕೊಡುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ: ಈಗ ಸಮಿತಿಯನ್ನು ಮಾಡುವುದಕ್ಕೆ ಸರ್ಕಾರ ಮಂಜೂರಾತಿ ಮಾಡಿದೆ. ಕಮಿಟಿಯನ್ನು ಆದಷ್ಟು ಬೇಗ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೆ ಕಮಿಟಿ ಮಾಡುವುದಕ್ಕೆ ನಾವು ನಿರ್ದೇಶನವನ್ನು ಕೊಟ್ಟಿದ್ದೇವೆ. ಅದನ್ನು ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಜಿಲ್ಲಾ ಉಸ್ತುವಾರಿ ಸಚಿವರು ಕಮಿಟಿಗಳನ್ನು ಮಾಡಬೇಕೆಂದು ಹೇಳಿ ಸೂಚನೆಯನ್ನು ಕೊಟ್ಟಿದ್ದಾರೆ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷತೆಯಲ್ಲಿ ಕಮಿಟಿಗಳಾಗಬೇಕೆಂದು ಕೊಟ್ಟಿದ್ದಾರೆ. ಎಲ್ಲಾ ತಾಲೂಕು ಪಂಚಾಯತಿ ಅಧ್ಯಕ್ಷರು ಇವತ್ತು ಅಧಿಕಾರವನ್ನು ಕಳೆದುಕೊಂಡಿದ್ದಾರೆ. ನಮ್ಮದು ಸ್ವಲ್ಪ ಕೇಳಿ. ಅನುಭವಕ್ಕೆ ಬರುತ್ತದೆ. ಯಾವ ಸಮಿತಿ ಮಾಡಿದ್ದಾರೆ ಸಾರ್,

ಶಾಸಕರುಗಳನ್ನು 10–12 ಜನರ ಗುಂಪಿನಲ್ಲಿ ಒಬ್ಬರನ್ನು ಮೆಂಬರ್ ಮಾಡಿ ಎಂದು ಹೇಳಿ ಇವರು ಸೂಚನೆ ಕೊಟ್ಟು ಕಮಿಟಿ ಮಾಡಿದ್ದೇವೆ. ಶಾಸಕರುಗಳು ಹೇಳಿದಂತೆ ಎಂದು ಇವರು ಇಲ್ಲಿ ನಿಂತುಕೊಂಡು ಹೇಳಿದರೆ ಕೃಷ್ಣಮೂರ್ತಿಯವರೇ, ನಾವು ಕೇಳಿ ಎದ್ದು ಹೋಗಬೇಕಾ? ಏನು ಕೊಟ್ಟಿದ್ದಾರೆ? ನಾವು ಕುಳಿತುಕೊಂಡು ಓದುವುದಿಲ್ಲವೆ?

ಅಧ್ಯಕ್ಷರು: ನೋಡಿ ಮಾಧುಸ್ವಾಮಿಯವರೆ, ಈ ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಏಕೆ ಬೇಕು? ಕಮಿಟಿಗಳನ್ನು ಮಾಡುವುದಕ್ಕೆ. ನೀವ್ಯಾಕೆ ಮಾಡಿಲ್ಲ ಎಂದು ನಾವು ಕೇಳುವುದು. ನಿಮ್ಮ ಇಲಾಖೆ ನೀವು ಸಮಿತಿಗಳನ್ನು ಮಾಡಿ. ಜಿಲ್ಲಾ ಉಸ್ತುವಾರಿ ಸಚಿವರು ಏಕೆ ಈ ಕಮಿಟಿಗಳನ್ನು ಮಾಡಬೇಕು ಅವರಿಗೆ ಯಾವ ಹಕ್ಕಿದೆ? ಅವರಿಗೇ ಏಕೆ ಮಾಡಬೇಕು. ಅವರು ಕಮಿಟಿಗಳನ್ನು...

ಅಧ್ಯಕ್ಷರು: ಪ್ರಶ್ನೆ ಮುಗಿದಿದೆ. ಮುಂದಿನ ಪ್ರಶ್ನೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5443
ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಉತ್ತರ ದಿನಾಂಕ : 13–7–2005
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳಿಗೆ ಶೌಚಾಲಯ ವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
ಆ.	ಹೆಣ್ಣು ಮಕ್ಕಳ ಶೌಚಾಲಯ ನಿರ್ಮಿಸುವುದಕ್ಕೆ ಸರ್ಕಾರ ವಿಶೇಷ ಗಮನ ತೆಗೆದುಕೊಳ್ಳ ಲಾಗುವುದೇ?	ಗ್ರಾಮೀಣ ಪ್ರದೇಶಗಳ ಮಹಿಳೆಯರ ಶೌಚಾಲಯ ವ್ಯವಸ್ಥೆಗಾಗಿ ಸರ್ಕಾರ ಜಲ ನಿರ್ಮಲ ಮತ್ತು ಸ್ವಚ್ಛ ಗ್ರಾಮ ಯೋಜನೆ ಗಳಡಿ ಕೌಟುಂಬಿಕ ಮತ್ತು ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡುತ್ತಿದೆ. ಈಗ ಸಂಪೂರ್ಣ ನೈರ್ಮಲ್ಯ ಅಂದೋಲನ ಕಾರ್ಯಕ್ರಮದಡಿ (TSC)ವೈಯಕ್ತಿಕ